ಕರ್ನಾಟಕ ಸರ್ಕಾರ

(ವಾಣಿಜ್ಯ ತೆರಿಗೆಗಳ ಇಲಾಖೆ)

**ಸಂಖ್ಯೆ:** ವಾ.ತೆ.ಜಂ.ಆ(ಆ)/ವಿ-3/ವಾಶಾ/ಸಿ.ಆರ್-05/24-25

T-NO - 1918

ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರವರ ಕಛೇರಿ (ಆಡಳಿತ),
ವಿ.ಸ & ಸೇ. ತೆ-3, ಬಿ-ಬ್ಲಾಕ್, ಟಿ.ಟಿ.ಎಂ.ಸಿ ಕಟ್ಟಡ,
2ನೇ ಮಹಡಿ, ಶಾಂತಿನಗರ, ಬೆಂಗಳೂರು-27.
ದೂರವಾಣಿ:080-22221048, **ದಿನಾಂಕ:**20.02.2025.

# ಟೆಂಡರ್ ಅಧಿಸೂಚನೆ

ವಿಷಯ: ಮಾಲೀಕರೇ ಚಾಲಕರಾಗಿರುವ ಖಾಸಗಿ ವಾಹನಗಳನ್ನು ಬಾಡಿಗೆ ಆಧಾರದ ಮೇಲೆ ಪಡೆಯುವ ಕುರಿತು.

ಉಲ್ಲೇಖ:
1. ಘನ ಸರ್ಕಾರದ ಪತ್ರ ಸಂಖ್ಯೆ: ಆಇ:59/ವಾತೆಇ-2016/ ದಿನಾಂಕ:30.03.2016.
2. ಘನ ಸರ್ಕಾರದ ಪತ್ರ ಸಂಖ್ಯೆ:ಆಇ:59/ವಾತೆಇ-2017/ ದಿನಾಂಕ:08.05.2017.
3. ಮಾನ್ಯ ವಾಣಿಜ್ಯ ತೆರಿಗೆಗಳ ಆಯುಕ್ತರ ಸುತ್ತೋಲೆ ಸಂಖ್ಯೆ: ವಿಹೆಚ್‌ಟಿ/ಸಿಆರ್-22/2019-20, ದಿನಾಂಕ:27.04.2022.
4. ಮಾನ್ಯ ವಾಣಿಜ್ಯ ತೆರಿಗೆಗಳ ಆಯುಕ್ತರವರ ಆದೇಶ ಸಂಖ್ಯೆ: ವಿಹೆಚ್‌ಟಿ/ಸಿಆರ್-15/2022-23. ದಿನಾಂಕ:22.12.2022.
5. ಮಾನ್ಯ ವಾಣಿಜ್ಯ ತೆರಿಗೆಗಳ ಆಯುಕ್ತರ ಪತ್ರದ ಸಂಖ್ಯೆ: ವಿಹೆಚ್‌ಟಿ/ಸಿಆರ್-11/2024-25. ದಿನಾಂಕ:15.02.2025.

*********

ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆಡಳಿತ), ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ-3, ಶಾಂತಿನಗರ, ಬೆಂಗಳೂರು-27 ಈ ವಿಭಾಗದ ಅಧೀನ ಕಛೇರಿಗಳ ಉಪಯೋಗಕ್ಕಾಗಿ 12 (ಹನ್ನೆರಡು) ಖಾಸಗಿ ವಾಹನಗಳನ್ನು ಮಾಸಿಕ ಬಾಡಿಗೆ ಆಧಾರದ ಮೇಲೆ ಪಡೆಯಲು ಉಲ್ಲೇಖಿತ (5)ರ ಮಾನ್ಯ ಆಯುಕ್ತರವರ ಪತ್ರದಲ್ಲಿ ಅನುಮತಿಯನ್ನು ನೀಡಲಾಗಿರುತ್ತದೆ.

ಇದರಂತೆ, ಮಾಲೀಕರೇ ಚಾಲಕರಾಗಿರುವ ಖಾಸಗಿ ವಾಹನಗಳನ್ನು ಇಲಾಖೆಯ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟು ಟೆಂಡರ್‌ನ್ನು ಆಹ್ವಾನಿಸಲಾಗಿದ್ದು, ಆಸಕ್ತಿಯುಳ್ಳ ಮಾಲೀಕರೇ ಚಾಲಕರಾಗಿರುವವರು ಮಾತ್ರ ಅರ್ಜಿಯನ್ನು ಕಛೇರಿಗೆ ಈ ಕೆಳಕಂಡ ವಿವರ ಗಳೊಂದಿಗೆ ಸಲ್ಲಿಸಬಹುದಾಗಿರುತ್ತದೆ. ಘನ ಸರ್ಕಾರಿ ಆದೇಶ ಸಂಖ್ಯೆ:ಶಿಅಸುಇ 96 ಶಿವಾನೀ 2012 ದಿನಾಂಕ:23.08.2012ರಲ್ಲಿ ನಿಗಧಿಪಡಿಸಿರುವ ಷರತ್ತಿಗೊಳಪಟ್ಟು ಖಾಸಗಿ ವಾಹನಗಳ ಸೇವೆಯನ್ನು ಪಡೆಯಲಾಗುವುದು.

## I. ವೇಳಾಪಟ್ಟಿ

| | | |
|---|---|---|
| 1. ಅರ್ಜಿ ಸಲ್ಲಿಸುವ ವಿಧ | : | ಮುಚ್ಚಿದ ಲಕೋಟೆ ಪದ್ದತಿ |
| 2. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ | : | ದಿನಾಂಕ: 20.03.2025 ಸಂಜೆ 5.00 ಗಂಟೆಗೆ |
| 3. ಲಕೋಟೆ ತೆರೆಯುವದಿನಾಂಕ | : | ದಿನಾಂಕ: 24.03.2025 ಬೆಳಿಗ್ಗೆ 11.30 ಗಂಟೆಗೆ |

## II. ಗುತ್ತಿಗೆ ಅವಧಿ

1. **ವಾಹನದ ಗುತ್ತಿಗೆ ಸೇವಾ ಅವಧಿ:** ವಾಹನಗಳನ್ನು ಬಾಡಿಗೆ ಆಧಾರದ ಮೇಲೆ ಈ ವಿಭಾಗಕ್ಕೆ ಒದಗಿಸುವ ಅವಧಿಯು ದಿನಾಂಕ: 01.04.2025 ರಿಂದ ದಿನಾಂಕ: 31.03.2026 ರವರೆಗೆ ಇರುತ್ತದೆ.

## III. ಅರ್ಜಿದಾರರು ಕಛೇರಿಗೆ ಸಲ್ಲಿಸಬೇಕಾದ ದಾಖಲಾತಿಯ ವಿವರಗಳು

### A. ವಾಹನ ಚಾಲಕರ ವಿವರಗಳು

| | | |
|---|---|---|
| 1. | **ಅರ್ಜಿದಾರರ ಹೆಸರು:** (ಅರ್ಜಿದಾರರ ಹೆಸರು ದಪ್ಪ ಅಕ್ಷರಗಳಲ್ಲಿ, ಅರ್ಜಿದಾರರ ವಿಳಾಸ ಹಾಗೂ ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ ಎರಡು ಭಾವಚಿತ್ರಗಳು) | |
| 2. | **ವಿಳಾಸದ ದಾಖಲೆಗಳು:** (ಮತದಾರರ ಗುರುತಿನ ಚೀಟಿ/ರೇಷನ್/ ಕಾರ್ಡ್/ಆಧಾರ್‌ಕಾರ್ಡ್/ಪಾಸ್‌ಪೋರ್ಟ್ ಅಥವಾ ಇತರೆ ಭಾವಚಿತ್ರ ಹೊಂದಿರುವ ಚುನಾವಣಾ ಗುರುತಿನ ಚೀಟಿ ಹಾಗೂ ಖಾಯಂ ವಿಳಾಸ ದಾಖಲೆ). | |
| 3. | **ಬ್ಯಾಂಕ್ ಖಾತೆಯ ವಿವರಗಳು:** (ಉಳಿತಾಯ ಖಾತೆ ಹೊಂದಿರುವ ಬ್ಯಾಂಕಿನ ಹೆಸರು, ವಿಳಾಸ, ಉಳಿತಾಯ ಖಾತೆಯ ಸಂಖ್ಯೆ ಹಾಗೂ ಚೆಕ್ಕಿನ ಪ್ರತಿ) | |
| 4. | **ಇತರೆ ದಾಖಲಾತಿಗಳು:** (ಕಡ್ಡಾಯವಾಗಿ ಪಾನ್‌ಕಾರ್ಡ್ ಮತ್ತು ಆಧಾರ್ ಕಾರ್ಡ್‌ನ ಪ್ರತಿಗಳು ಹಾಗೂ ಮಾಲೀಕರಿಗೆ ಸಂಬಂಧಿಸಿದಂತೆ ಡ್ರೈವಿಂಗ್ ಲೈಸೆನ್ಸ್, ಚಾಲಕರ ದೈಹಿಕ ಸಾಮರ್ಥ್ಯ ಪ್ರಮಾಣ ಪತ್ರ) | |

## B. ಖಾಸಗಿ ವಾಹನಕ್ಕೆ ಸಂಬಂದಿಸಿದ ವಿವರಗಳು:

| | | |
|---|---|---|
| 1. | ವಾಹನದ ನೋಂದಣಿ ಪುಸ್ತಕದ ಪ್ರತಿ. | |
| 2. | ವಾಹನದ ವಿಮಾ ಪಾಲಿಸಿಯ ಪ್ರತಿ. | |
| 3. | ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ನೀಡಿರುವ ವಾಹನ ಚಾಲನಾ ಪರವಾನಗಿ ಪ್ರತಿ. | |
| 4. | ರಸ್ತೆ ತೆರಿಗೆಯನ್ನು (Road Tax) ಸಂಬಂಧಿಸಿದ ಇಲಾಖೆಗೆ ಪಾವತಿಸಿರುವ ವಿವರದ ಪ್ರತಿ. | |
| 5. | ವಾಯು ಮಾಲಿನ್ಯ ಇಲಾಖೆಯವರು ನೀಡುವ ಪ್ರಮಾಣ ಪತ್ರ. | |

IV. **ವಾಹನದ ಮಾದರಿ:**–2018ರಲ್ಲಿ ತಯಾರಾದ ಮತ್ತು ನಂತರದ ವರ್ಷಗಳಲ್ಲಿ ತಯಾರದ (M.Y. 2018 onwards) ಖಾಸಗಿ ವಾಹನ

V. **ಮಾಸಿಕ ಬಾಡಿಗೆಯ ಗರಿಷ್ಠ ಮೊತ್ತ:–**

1. Non AC ವಾಹನದ ಮಾಸಿಕ ಬಾಡಿಗೆಯ ಗರಿಷ್ಠ ಮೊತ್ತ ₹35,000/–
2. AC ವಾಹನದ ಮಾಸಿಕ ಬಾಡಿಗೆಯ ಗರಿಷ್ಠ ಮೊತ್ತ ₹40,000/–

3. **ಟೆಂಡರ್ ಪ್ರಕಟಣೆಯ ಷರತ್ತು ಮತ್ತು ನಿಬಂಧನೆಗಳು:**

1. *ಈ ಟೆಂಡರ್ ಅಧಿಸೂಚನೆಯಲ್ಲಿ ಇರುವ ಷರತ್ತುಗಳಲ್ಲದೇ ಸುಗಮ ಸೇವೆಯ ನಿರ್ವಹಣೆಗಾಗಿ ಬೇಕಾಗುವ ಇತರೆ ಯಾವುದೇ ಷರತ್ತುಗಳನ್ನು ವಿಧಿಸುವ ಅಧಿಕಾರವನ್ನು ವಾಣಿಜ್ಯ ತೆರಿಗೆಗಳ ಇಲಾಖೆಯ ಜಂಟಿ ಆಯುಕ್ತರು (ಆಡಳಿತ), ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ-3, ಶಾಂತಿನಗರ, ಬೆಂಗಳೂರು-560027 ಇವರು ಹೊಂದಿರುತ್ತಾರೆ.*
2. *ಮೇಲ್ಕಂಡ ವಿವರಗಳು ಹಾಗೂ ಎಲ್ಲಾ ದಾಖಲಾತಿಗಳ ಪ್ರತಿಗಳನ್ನು ಮುಚ್ಚಿದ ಲಕೋಟೆಯಲ್ಲಿಟ್ಟು, ಲಕೋಟೆಯ ಮೇಲೆ ದಪ್ಪ ಅಕ್ಷರದಲ್ಲಿ* ***'ಖಾಸಗಿ ವಾಹನಗಳ ಸೇವೆ'*** *ಎಂದು ನಮೂದಿಸುವುದು.*
3. *ಪೂರ್ಣ ವಿವರಗಳು ಹಾಗೂ ಮೇಲ್ಕಂಡ ದಾಖಲಾತಿಗಳನ್ನು ಸಲ್ಲಿಸದೇ ಇದ್ದ ಪಕ್ಷದಲ್ಲಿ ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು.*
4. *ಅರ್ಜಿಯನ್ನು ವಾಣಿಜ್ಯ ತೆರಿಗೆ ಜಂಟಿ ಆಯುಕ್ತರವರ ಕಛೇರಿ(ಆ) ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ-03, ಬಿ.ಎಂ.ಟಿ.ಸಿ ಕಟ್ಟಡ, ಟಿ.ಟಿ.ಎಂ.ಸಿ ಬಿ ಬ್ಲಾಕ್, 2ನೇ ಮಹಡಿ, ಶಾಂತಿನಗರ, ಬೆಂಗಳೂರು-27. ಇವರ ಕಛೇರಿಯಲ್ಲಿ ಸಲ್ಲಿಸುವುದು.*

5. ಅರ್ಜಿಯನ್ನು ಸಲ್ಲಿಸಿರುವುದಕ್ಕೆ ಸ್ವೀಕೃತಿ ಪಡೆಯುವುದು ಹಾಗೂ ಕಾರ್ಯ ನಿರ್ವಹಣೆಯಲ್ಲಿ ಪಾಲಿಸಬೇಕಾದ ನಿಯಮಗಳು/ ಷರತ್ತುಗಳನ್ನು ವಾಹನ ಮಾಲೀಕರು ಕಡ್ಡಾಯವಾಗಿ ಪಾಲಿಸತಕ್ಕದ್ದು.

6. ಅರ್ಹಗೊಂಡು ಆಯ್ಕೆಯಾದ ವಾಹನ ಮಾಲೀಕರು ತಮಗೆ ನೀಡಿದ ಕಾರ್ಯಾದೇಶದಂತೆ ಕಾರ್ಯನಿರ್ವಹಿಸದಿದ್ದಲ್ಲಿ ಇವರ ಸೇವೆಯನ್ನು ಯಾವುದೇ ಮುನ್ಸೂಚನೆ ಇಲ್ಲದೇ ರದ್ದುಪಡಿಸುವ ಅಧಿಕಾರವನ್ನು ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು(ಆಡಳಿತ), ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ-03, ಶಾಂತಿನಗರ, ಬೆಂಗಳೂರು-560027 ಇವರು ಹೊಂದಿರುತ್ತಾರೆ.

7. ಅನಾರೋಗ್ಯವೂ ಸೇರಿದಂತೆ ಅನಿವಾರ್ಯ ಸಂದರ್ಭಗಳಲ್ಲಿ ತಿಂಗಳಲ್ಲಿ **ಒಂದ ದಿನ ಮಾತ್ರ** ವಿಭಾಗದ ಮುಖ್ಯಸ್ಥರಿಂದ/ ಹಂಚಿಕೆಯಾದ ಅಧಿಕಾರಿಯವರಿಂದ ಅಥವಾ ವಾಹನ ಉಪಯೋಗಿಸುವ ಕಛೇರಿಯ ಅಧಿಕಾರಿಯವರಿಂದ ಅನುಮತಿ ಪಡೆದು, ಮಾಲೀಕ-ಚಾಲಕರು ರಜೆ ಪಡೆಯಬಹುದು. ಆ ಅವಧಿ ಯಲ್ಲಿ ಬದಲಿ ವಾಹನದ ವ್ಯವಸ್ಥೆಯನ್ನು ಕಡ್ಡಾಯವಾಗಿ ಮಾಡಲೇಬೇಕು. ಈ ಬದಲಿ ವ್ಯವಸ್ಥೆಯು ರಜೆ ಅವಧಿಗೆ ಪೂರ್ಣ ಪ್ರಮಾಣದಲ್ಲಿ ಇರತಕ್ಕದ್ದು. ಇಲ್ಲದಿದ್ದರೆ, **'ಗೈರುಹಾಜರಿ ದಿವಸ'** ಎಂದು ಪರಿಗಣಿಸಿ ಬಾಡಿಗೆ ಮೊತ್ತವನ್ನು ಕಡಿತಗೊಳಿಸಲಾಗುವುದು.

8. ಸಾರ್ವತ್ರಿಕ ರಜೆ ದಿನಗಳಲ್ಲಿ ಅಗತ್ಯ ಬಿದ್ದಾಗ ತುರ್ತು ಕೆಲಸಗಳ ಸಂದರ್ಭಗಳಲ್ಲಿ ವಾಹನ ಚಾಲಕರು ಹೆಚ್ಚುವರಿ ಬಾಡಿಗೆಯನ್ನು ನಿರೀಕ್ಷಿಸದೆ ಕಛೇರಿ ಕರ್ತವ್ಯ ನಿರ್ವಹಿಸಲು ಸಿದ್ಧರಿರಬೇಕು.

9. ಮಾಸಿಕ ಬಾಡಿಗೆ ಆಧಾರದ ಮೇಲೆ ಹಾಗೂ ಆದೇಶದಲ್ಲಿನ ದರ ಪಟ್ಟಿಗೆ ಒಳಪಟ್ಟು ಮಾತ್ರ ವಾಹನಗಳನ್ನು ಬಾಡಿಗೆಗೆ ಪಡೆಯಲಾಗುತ್ತದೆ.

10. ಖಾಸಗಿ ವಾಹನ ಚಾಲಕರು ಕಟ್ಟು ನಿಟ್ಟಾಗಿ ಸಮಯಪಾಲನೆ ಮಾಡತಕ್ಕದ್ದು. ಕಛೇರಿ ಅಧಿಕಾರಿಗಳು ಸಂಬಂಧಿಸಿದಂತೆ ಎಲ್ಲಾ ಕಛೇರಿ ಕಾರ್ಯ ನಿರ್ವಹಣೆಗೆ ಕಾಲಮಿತಿಯ ನಿರ್ಬಂಧವಿಲ್ಲದೆ ನಿರ್ವಹಿಸತಕ್ಕದ್ದು. ವಾಹನ ಉಪಯೋಗಿಸುವ ಕಛೇರಿಯ ಮುಖ್ಯಸ್ಥರು / ಹಂಚಿಕೆಯಾದ ಅಧಿಕಾರಿಯವರಿಂದ ಈ ಕುರಿತು ದೂರುಗಳು ಬಂದಲ್ಲಿ ಅಂತಹ ವಾಹನದ ಬಳಕೆಯನ್ನು ತಕ್ಷಣ ನಿಲ್ಲಿಸುವ ಅಥವಾ ಒಪ್ಪಂದವನ್ನು ರದ್ದುಪಡಿಸುವ ಅಧಿಕಾರವನ್ನು ವಿಭಾಗದ ಜಂಟಿ ಆಯುಕ್ತರವರು ಹೊಂದಿರುತ್ತಾರೆ.

11. ವಾಹನವನ್ನು ಸರ್ಕಾರಿ ಕೆಲಸಕ್ಕೆ ಉಪಯೋಗಿಸುವಾಗ **'ಸರ್ಕಾರಿ ಕೆಲಸದ ಸೇವೆಯಲ್ಲಿ'** ಎಂಬ ನಾಮಫಲಕವಿರಬೇಕು. ಪಾರ್ಕಿಂಗ್ ಶುಲ್ಕ, ಟೋಲ್ ಶುಲ್ಕ ಹಾಗೂ ಇತ್ಯಾದಿಗಳನ್ನು ವಾಹನ ಮಾಲೀಕರೇ / ಚಾಲಕರೇ ಭರಿಸತಕ್ಕದ್ದು.

12. ವಾಹನವನ್ನು ಚಾಲನೆ ಮಾಡುವಾಗ ಮತ್ತು ಕರ್ತವ್ಯದಲ್ಲಿರುವಾಗ

ಕಡ್ಡಾಯವಾಗಿ ಸಮವಸ್ತ್ರವನ್ನು ಧರಿಸತಕ್ಕದ್ದು.

13. ವಾಹನದ ಯಾವುದೇ ಕಾನೂನು ಉಲ್ಲಂಘನೆಗೆ ಸ್ವತಃ ಮಾಲೀಕರೇ ಜವಾಬ್ದಾರರಾಗಿರುತ್ತಾರೆ.

14. ವಾಹನವು ಕಛೇರಿಯ ಕೆಲಸಕ್ಕೆ ಉಪಯೋಗಿಸಿದ ನಂತರ ಸಂಬಂಧಪಟ್ಟ ಅಧಿಕಾರಿಗಳಿಂದ ಕಾಲಕಾಲಕ್ಕೆ ಸರಿಯಾಗಿ ಉಪಯೋಗಿಸಿದ ವಿವರದೊಂದಿಗೆ ಟ್ರಿಪ್ ಶೀಟಿನಲ್ಲಿ ಭರ್ತಿಮಾಡಿ ಸಹಿ ಮಾಡುವುದು.

15. ಈ ಇಲಾಖೆಗೆ ಹೊರಗುತ್ತಿಗೆ ಆಧಾರದ ಮೇಲೆ ವಾಹನವನ್ನು ಪಡೆದಿರುವಂತಹ ಅವಧಿಯಲ್ಲಿ ಬೇರೆ ಯಾವುದೇ ಇಲಾಖೆಯಲ್ಲಿ ಅಥವಾ ಖಾಸಗಿ ಸಂಸ್ಥೆಯಲ್ಲಿ ಅಥವಾ ಬೇರೆ ಇನ್ನಾವುದೇ ಕೆಲಸಗಳಿಗೆ ವಾಹನಗಳನ್ನು ಉಪಯೋಗಿಸುವಂತಿಲ್ಲ ಹಾಗೂ ವಾಹನವನ್ನು ಪೂರ್ಣವಾಗಿ ವಾಣಿಜ್ಯ ತೆರಿಗೆ ಇಲಾಖಾ ಸೇವೆಗಾಗಿ ಮೀಸಲಿಡತಕ್ಕದ್ದು.

16. ಈ ಭಾಗದ ಅಧಿಕಾರಿಗಳು ರಜೆ/ಅನ್ಯಸೇವೆ/ಇನ್ನಾವುದೇ ಕಛೇರಿ ಕಾರ್ಯ ನಿಮಿತ್ತ ಕಛೇರಿಯಿಂದ ಹೊರಗೆ ತೆರಳಿದ ಸಂದರ್ಭದಲ್ಲಿ ಅವರಿಗೆ ಸಂಬಂಧಿಸಿದ ವಾಹನ ಚಾಲಕರು ಆ ದಿನ ಪೂರ್ವಾಹ್ನ 10–00 ಗಂಟೆಗೆ ಕಡ್ಡಾಯವಾಗಿ **ವಾಣಿಜ್ಯ ತೆರಿಗೆಗಳ ಸಹಾಯಕ ಆಯುಕ್ತರು(ಕೇಂದ್ರ ಕಛೇರಿ)** ಇವರ ಬಳಿ ವರದಿ ಮಾಡಿಕೊಂಡು ಕಛೇರಿ ಆವರಣದಲ್ಲಿಯೇ ವಾಹನದೊಂದಿಗೆ ಇರತಕ್ಕದ್ದು. ಇಲ್ಲದಿದ್ದ ಪಕ್ಷದಲ್ಲಿ ಗೈರು ಹಾಜರು ಎಂದು ಪರಿಗಣಿಸಿ ಆ ದಿನದ ಸಂಭಾವನೆಯನ್ನು ಕಡಿತಗೊಳಿಸಲಾಗುವುದು.

17. ಖಾಸಗಿ ವಾಹನ ಮಾಲೀಕರು ಮಾಸಿಕ ಬಾಡಿಗೆಗೆ ಸಂಬಂಧಿಸಿದಂತೆ ಈ ಕಛೇರಿಗೆ ಬಿಲ್ಲುಗಳನ್ನು ಸಲ್ಲಿಸುವಾಗ ಮಾಹೆಯಲ್ಲಿ ಕರ್ತವ್ಯಕ್ಕೆ ಹಾಜರಾದ ದಿನಗಳು, ಒಟ್ಟು ಓಡಿಸಿದ ಕಿಲೋಮೀಟರ್ ಮತ್ತು ಸಮಯಕ್ಕೆ ಸಂಬಂಧಿಸಿದ ದೃಢೀಕೃತ ಪ್ರಮಾಣ ಪತ್ರವನ್ನು ಅಧಿಕಾರಿಗಳಿಂದ ಪಡೆದು ಬಿಲ್ಲಿನ ಜೊತೆ ಸಲ್ಲಿಸುವುದು.

18. ಮೇಲಿನ ಷರತ್ತು ಮತ್ತು ನಿಬಂಧನೆಗಳನ್ನು ಪಾಲಿಸದಿರುವುದು ಮತ್ತು ನಿರ್ಲಕ್ಷಿಸಿರುವುದು ಕಂಡುಬಂದಲ್ಲಿ ಯಾವುದೇ ಸೂಚನೆ ನೀಡದೇ ಹೊರಗುತ್ತಿಗೆ ಆಧಾರದ ಕರಾರನ್ನು ರದ್ದು ಪಡಿಸಲಾಗುವುದು.

19. ವಾಹನ ಚಾಲಕರು ಒಂದು ವೇಳೆ ಕರಾರು ಒಪ್ಪಂದವನ್ನು ರದ್ದುಪಡಿಸಬೇಕಾದರೆ, ಎರಡು ತಿಂಗಳು ಮುಂಚಿತವಾಗಿ ಈ ಕಛೇರಿಗೆ ಲಿಖಿತವಾಗಿ ತಿಳಿಸತಕ್ಕದ್ದು.. ತಪ್ಪಿದಲ್ಲಿ ಒಂದು ತಿಂಗಳ ವಾಹನದ ಬಾಡಿಗೆ ಮೊತ್ತವನ್ನು ಮಂಜೂರು ಮಾಡುವುದಿಲ್ಲ ಹಾಗೂ ಇದಕ್ಕೂ ಮೊದಲು ಸಹ ಕರಾರು ರದ್ದುಗೊಳಿಸುವ ಹಕ್ಕು ವಿಭಾಗದ ವಾಣಿಜ್ಯ ತೆರಿಗೆಗಳ ಆಯುಕ್ತರು / ಜಂಟಿ ಆಯುಕ್ತರವರದ್ದಾಗಿರುತ್ತದೆ.

20. ಆದಾಯ ತೆರಿಗೆ, ಸೇವಾ ತೆರಿಗೆ ಹಾಗೂ ಮುಂದೆ ಉದ್ಭವಿಸ ಬಹುದಾದ ಯಾವುದೇ ರೀತಿಯ ಮೊತ್ತವನ್ನು ಸರ್ಕಾರಕ್ಕೆ ಸಂದಾಯ ಮಾಡಬೇಕಾದಲ್ಲಿ ಮಾಸಿಕ ಬಿಲ್ಲಿನ ಮೊತ್ತದಲ್ಲಿ ಸದರಿ ಮೊತ್ತವನ್ನು ಕಡಿತಗೊಳಿಸಿ, ಉಳಿದ ಮೊತ್ತವನ್ನು ವಾಹನ ಮಾಲೀಕರಿಗೆ ಪಾವತಿಸಲಾಗುವುದು.

21. ಯಾವುದೇ ಮುನ್ಸೂಚನೆ ನೀಡದೆ ಚಾಲಕರ ಸೇವೆಯನ್ನು ರದ್ದು ಗೊಳಿಸುವ ಅಧಿಕಾರವನ್ನು ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆಡಳಿತ), ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ-3, ಶಾಂತಿನಗರ, ಬೆಂಗಳೂರು-27 ಇವರು ಹೊಂದಿರುತ್ತಾರೆ.

22. ವಾಹನದ ಯಾವುದೇ ರೀತಿಯ ಕಾನೂನು ಉಲ್ಲಂಘನೆಗೆ ಸ್ವತ: ವಾಹನದ ಮಾಲೀಕರೇ ಜವಾಬ್ದಾರರಾಗಿರುತ್ತಾರೆ.

* **ಪ್ರತಿ ವಾಹನದ ಗುಣಮಟ್ಟವನ್ನು ಹಾಗೂ ಚಾಲನ ಕೌಶಲ್ಯವನ್ನು ಪರಿಶೀಲಿಸಿ ನಂತರವೇ ವಾಹನವನ್ನು ತೆಗೆದುಕೊಳ್ಳಲಾಗುವುದು.**

20/02/2025

**ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆಡಳಿತ),**
**ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ-3,**
**ಶಾಂತಿನಗರ, ಬೆಂಗಳೂರು.**

ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆಡಳಿತ)
ವಿ.ಸ.ಮ.ಸೇ.ತೆ.ಕ.-03, ಬೆಂಗಳೂರು-560 027

<u>ಪ್ರತಿಯನ್ನು:</u>

1. ಕಛೇರಿ ಸೂಚನಾ ಫಲಕಕ್ಕೆ
2. ಮಾನ್ಯ ವಾಣಿಜ್ಯ ತೆರಿಗೆಗಳ ಅಪರ ಆಯುಕ್ತರು (ಕೇಂದ್ರ ಕಛೇರಿ)-2, ಬೆಂಗಳೂರು ಇವರಿಗೆ ಮಾಹಿತಿಗಾಗಿ
3. ಮಾನ್ಯ ವಾಣಿಜ್ಯ ತೆರಿಗೆಗಳ ಅಪರ ಆಯುಕ್ತರು (ಇ-ಆಡಳಿತ), ಬೆಂಗಳೂರು ಇವರಿಗೆ ಮಾಹಿತಿಗಾಗಿ ಹಾಗೂ ಇಲಾಖಾ ಅಂತರ್ಜಾಲದಲ್ಲಿ ಪ್ರಕಟಿಸಲು ಕೋರಿದೆ.
4. ಆಪ್ತ ಶಾಖೆಗೆ

**ಕರ್ನಾಟಕ ಸರ್ಕಾರ**

**(ವಾಣಿಜ್ಯ ತೆರಿಗೆಗಳ ಇಲಾಖೆ)**

ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರವರ ಕಛೇರಿ (ಆಡಳಿತ),
ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ-03,
ಕೊಠಡಿ ಸಂಖ್ಯೆ: 205, 2ನೇ ಮಹಡಿ, ಟಿ.ಟಿ.ಎಂ.ಸಿ. ಬಿ-ಬ್ಲಾಕ್, ಶಾಂತಿನಗರ,
ಬೆಂಗಳೂರು-560027. ದೂರವಾಣಿ:080-22221048

**ಸಂಖ್ಯೆ:** ವಾ.ತೆ.ಜಂ.ಆ(ಆ)/ವಿ-3/ವಾ.ಶಾ/ಸಿ.ಆರ್-05/2024-25 **ದಿನಾಂಕ:**20/02/2025.

## ಟೆಂಡರ್ ಪ್ರಕಟಣೆ

ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರವರ ಕಛೇರಿ (ಆಡಳಿತ), ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ-03, ಶಾಂತಿನಗರ, ಬೆಂಗಳೂರು ಕಛೇರಿಗಳ ಉಪಯೋಗಕ್ಕಾಗಿ ಒಟ್ಟು 12 ಖಾಸಗಿ ವಾಹನಗಳನ್ನು ಮಾಸಿಕ ಬಾಡಿಗೆ ಆಧಾರದ ಮೇಲೆ ಪಡೆದುಕೊಳ್ಳಲು ಇಲಾಖೆಯ ನಿಬಂಧನೆ ಹಾಗೂ ಷರತ್ತಿಗೆ ಒಳಪಟ್ಟು ಮಾಲೀಕರೇ ವಾಹನ ಚಾಲಕರಾಗಿರುವವರಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ.

**ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:20.03.2025ರ ಸಮಯ ಸಂಜೆ 5.00 ಗಂಟೆ.**

ಟೆಂಡರ್ ವಿವರಗಳನ್ನು ವಾಣಿಜ್ಯ ತೆರಿಗೆ ಇಲಾಖೆಯ ವೆಬ್‌ಸೈಟ್ **http://gst.kar.nic.in** ಮೂಲಕ ಪಡೆಯಬಹುದಾಗಿದ್ದು, ಟೆಂಡರ್‌ಗಳನ್ನು ಸ್ವೀಕರಿಸುವ ಅಧಿಕಾರಿಯು ಯಾವುದೇ ಕಾರಣ ನೀಡದೇ ಟೆಂಡರ್‌ನ್ನು ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ. ಹೆಚ್ಚಿನ ವಿವರಗಳನ್ನು ಈ ಕೆಳಗೆ ಸಹಿ ಮಾಡಿರುವ ಅಧಿಕಾರಿಯವರ ಕಛೇರಿಯಿಂದ ಕಛೇರಿ ಕರ್ತವ್ಯದ ವೇಳೆಯಲ್ಲಿ / ಮೇಲ್ಕಾಣಿಸಿದ ವೆಬ್‌ಸೈಟ್‌ನಿಂದಲೂ ಸಹ ಮಾಹಿತಿಯನ್ನು ಪಡೆಯಬಹುದಾಗಿರುತ್ತದೆ.

20/02/2025

ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆಡಳಿತ),
ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ-3,
ಶಾಂತಿನಗರ, ಬೆಂಗಳೂರು-27.

ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆಡಳಿತ)
ವಿ.ಸ.&ಸೇ.ತೆ.ಕ.-03, ಬೆಂಗಳೂರು-560 027